| | | | | | | |
|---|---|---|---|---|---|---|
| 23. ರಾಯಚೂರು | 1 | 6 | 2 | 1 | 1 | 1 |
| 24. ರೈಲ್ವೇಸ್ | 17 | 18 | 13 | 2 | 3 | 1 |
| | 271 | 393 | 403 | 92 | 165 | 107 |

**ಹುಬ್ಬಳ್ಳಿ ನಗರದ ಚೆಕ್‌ಪೋಸ್ಟನ್ನು ಬೈಪಾಸ್ ರಸ್ತೆಯ ಹತ್ತಿರ ಸ್ಥಳಾಂತರಿಸುವುದು**

883(1656) ಶ್ರೀ ಪಿ.ಸಿ. ಸಿದ್ದನಗೌಡರ್(ಕಲಘಟಗಿ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ನಗರದಲ್ಲಿ ಮಧ್ಯ ಭಾಗದಲ್ಲಿರುವ ಚೆಕ್‌ಪೋಸ್ಟ್ ಬಳಿ ಲಾರಿಗಳು ಹೋಗದೇ ಬೈಪಾಸ್ ರಸ್ತೆಯ ಮೂಲಕ ಹಾದು ಹೋಗುವುದರಿಂದ ಸರ್ಕಾರಕ್ಕೆ ಬರುವ ಆದಾಯ ಸೋರಿಹೋಗುತ್ತಿರುವ ಸಂಗತಿ ಸರ್ಕಾರಕ್ಕೆ ತಿಳಿದಿದೆಯೇ?

ಆ) ಹಾಗಿದ್ದಲ್ಲಿ ಹುಬ್ಬಳ್ಳಿ ನಗರದ ಮಧ್ಯೆಯಿರುವ ಚೆಕ್‌ಪೋಸ್ಟನ್ನು ಬೈಪಾಸ್ ರಸ್ತೆ ಹತ್ತಿರ ಸ್ಥಳಾಂತರಿಸುವ ವಿಚಾರವೇನಾದರೂ ಇದೆಯೇ?

ಇ) ಇದ್ದಿದ್ದರೆ ಯಾವಾಗ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು?

ಈ) ಈ ಚೆಕ್‌ಪೋಸ್ಟನ್ನು ಆದಷ್ಟು ಬೇಗ ಆದಾಯವನ್ನು ಉಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ವೀರಪ್ಪಮೊಯಿಲಿ(ಮುಖ್ಯಮಂತ್ರಿಗಳು) :-

ಅ) ಕೆಲವೊಂದು ಲಾರಿಗಳು ಬೈಪಾಸ್ ರಸ್ತೆಯಲ್ಲಿ ಹಾದು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದಾಯ ಸೋರಿಹೋಗುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಹೌದು

ಇ) ಬೈಪಾಸ್ ರಸ್ತೆಯ ಕಾಮಗಾರಿ ಪೂರ್ಣಗೊಂಡು ವಾಹನ ಸಂಚಾರಕ್ಕೆ ಆರಂಭಿಸಿದೊಡನೆ ಕಾರ್ಯಾಚರಣೆಯನ್ನು ಸ್ಥಳಾಂತರಿಸಲಾಗುವುದು.

ಈ) ಆದಷ್ಟು ಬೇಗ ಸ್ಥಳಾಂತರಿಸಲಾಗುವುದು.

**ಕಲಘಟಗಿ ಕ್ಷೇತ್ರವನ್ನು ಮಲೆನಾಡು ಅಭಿವೃದ್ಧಿಗೆ ಸೇರ್ಪಡೆ.**

886(1654) ಶ್ರೀ ಪಿ.ಸಿ. ಸಿದ್ದನಗೌಡರ್(ಕಲಘಟಗಿ) :- ಮಾನ್ಯ ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ತಂತ್ರಜ್ಞಾನ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕೆಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ಕಲಘಟಗಿ ತಾಲ್ಲೂಕನ್ನು ಮಾತ್ರ ಸೇರಿಸಿರುವ ಸಂಗತಿ ನಿಜವೇ?

ಆ) ಹಾಗಿದ್ದಲ್ಲಿ ಇದರಿಂದ ಇಡೀ ಕಲಘಟಗಿ ಕ್ಷೇತ್ರವನ್ನು ಸಂಪೂರ್ಣವಾಗಿ ಕಡೆಗಣಿಸಿದಂತಾಗುವುದಿಲ್ಲವೇ? ಇದರಿಂದ ಅವುಗಳ ಅಭಿವೃದ್ಧಿ ಕುಂಠಿತವಾದಂತಾಗುವುದಿಲ್ಲವೇ?

ಇ) ಹಾಗಿದ್ದಲ್ಲಿ ಇಡೀ ಕಲಘಟಗಿ ವಿಧಾನಸಭಾ ಕ್ಷೇತ್ರವನ್ನು ಆ ಯೋಜನೆಯಡಿಯಲ್ಲಿ ಸೇರಿಸುವುದು ಸೂಕ್ತವಲ್ಲವೇ?

ಈ) ಹಾಗಿದ್ದಲ್ಲಿ ಈ ಕಾರ್ಯ ಯಾವಾಗ ಆರಂಭಿಸುವಿರಿ? ಇದಕ್ಕೆ ಬಿಡುಗಡೆ ಮಾಡಿರುವ ಹಣವೆಷ್ಟು? ಮತ್ತೆ ಅವಶ್ಯವಿರುವ ಹಣವನ್ನು ಯಾವಾಗ ಬಿಡುಗಡೆ ಮಾಡುವಿರಿ?

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ತಂತ್ರಜ್ಞಾನ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು) :-

ಅ) ಹೌದು

ಇ) ತಾಲ್ಲೂಕನ್ನು ಘಟಕವನ್ನಾಗಿ ಪರಿಗಣಿಸಿರುವುದರಿಂದ ವಿಧಾನಸಭಾ ಕ್ಷೇತ್ರಾವಾರು ಈ ಕಾರ್ಯಕ್ರಮದಲ್ಲಿ ಪರಿಗಣಿಸಲು ಸಾಧ್ಯವಿಲ್ಲ

**ಧಾರಾವಾಡ ಜಿಲ್ಲೆಯಲ್ಲಿ ಅಸಿಸ್ಟೆಂಟ್ ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿಗಳ ಕಛೇರಿಗಳು**

887(1652) ಶ್ರೀ ಮಂಜುನಾಥ. ಸಿ. ಕುನ್ನೂರ್(ಶಿಗ್ಗಾಂವ್) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರಾವಾಡ ಜಿಲ್ಲೆಯಲ್ಲಿ ಎಷ್ಟು ಎ.ಸಿ.ಟಿ.ಓ. ಕಛೇರಿಗಳು ಇವೆ ಮತ್ತು ಅವುಗಳು ಯಾವ ತಾಲ್ಲೂಕುಗಳನ್ನು ಒಳಗೊಂಡಿದೆ.

ಆ) ಪ್ರತಿಯೊಂದು ಎ.ಸಿ.ಟಿ.ಓ.ಆಫೀಸಿನಿಂದ 1991-92ರಲ್ಲಿ ಹಾಗೂ 1992-93ರಲ್ಲಿ ಸರ್ಕಾರಕ್ಕೆ ಬಂದ ಆದಾಯವೆಷ್ಟು?

ಇ) ಶಿಗ್ಗಾಂ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಎಷ್ಟು ಜನ ವ್ಯವಹಾರಸ್ಥರು ತಮ್ಮ ರಿಟರ್ನ್ಸ್ ಕೊಟ್ಟಿರುವರು.

ಈ) ಶಿಗ್ಗಾಂ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಎ.ಸಿ.ಟಿ.ಓ. ಕಛೇರಿ ಪ್ರಾರಂಭಿಸುವ ಸಲಹೆ ಸರ್ಕಾರದ ಮುಂದೆ ಇದೆಯೇ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮವೇನು?

ಶ್ರೀ ವೀರಪ್ಪಮೊಯಿಲಿ(ಮುಖ್ಯಮಂತ್ರಿಗಳು) :-

ಅ) ಒಟ್ಟು ಹದಿನಾರು ಕಛೇರಿಗಳು. ಕಛೇರಿಗಳ ಕಾರ್ಯವ್ಯಾಪ್ತಿಯನ್ನು ಅನುಬಂಧ - ಆ ದಲ್ಲಿ ಲಗತ್ತಿಸಿದೆ.

ಆ) ಸರ್ಕಾರಕ್ಕೆ ಬಂದ ಒಟ್ಟು ಆದಾಯ :-